ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹೆಂಗಸರು ಮೌನವ್ರತ ಯಾವಾಗ ಮಾಡುತ್ತಾರೆ?*



ದಂತವೈದ್ಯ ಕುರ್ಚಿಯಲ್ಲಿ ಮಲಗಿಸಿ ಆಆಆಆ ಎಂದು ಬಾಯಿ ತೆರೆಸಿರುವಾಗ.

ಅನ್ನಪೂರ್ಣ, ಶಿವಮೊಗ್ಗ

*ಕಾಳಿದಾಸನ ಮನೆಗೂ, ಭೋಜರಾಜನ ಅರಮನೆಗೂ ಎಷ್ಟು ದೂರ ಇತ್ತು?*

ಕಿರಿಕಿರಿಯಾಗುವಷ್ಟು ಹತ್ತಿರ ಮತ್ತು ಕರೆಯಲಾಗದಷ್ಟು ದೂರದ ಮಧ್ಯದಷ್ಟು.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಹೆಣ್ಣಿನ ಹೃದಯ ಗೆಲ್ಲಲು ಮುಖ್ಯವಾದ ಮಾರ್ಗ ಯಾವುದು?*

ಕತ್ತೆಯಂತೆ ಹೊತ್ತು, ಎತ್ತಿನಂತೆ ದುಡಿದು, ಕೋಲೆಬಸವನಂತೆ ತಲೆಯಾಡಿಸುವುದು.

ಕುಬೇರಪ್ಪ ಎಂ. ವಿಭೂತಿ, ಹರಿಹರ

*ಕೈ ಕೆಸರಾಗದೆ ಬಾಯಿ ಮೊಸರಾಗುವ ಕಾಯಕ ಯಾವುದು?*

ಲಸ್ಸಿ ಬಾರ್‌ನಲ್ಲಿ ಟೇಸ್ಟರ್ ಕೆಲಸ!

ವೈ.ಎನ್. ಸುಂದರೇಶನ್, ಮೈಸೂರು

*ಆರಂಭವೂ ಹೆಣ್ಣಿನಿಂದಲೇ, ಅಂತ್ಯವೂ ಹೆಣ್ಣಿನಿಂದಲೇ ಅಂತೆ. ಇದನ್ನು ತಪ್ಪಿಸುವುದು ಹೇಗೆ?*



ಟೆಸ್ಟ್‌ಟ್ಯೂಬ್‌ನಲ್ಲಿ ಹುಟ್ಟಿ, ಯುದ್ಧದಲ್ಲಿ ಮಡಿಯಿರಿ.

ಎಂ.ಎ. ಕುಮಾರ್, ಬೆಂಗಳೂರು

*ಅಹಂ ಎನ್ನುವುದು ಯಾರಲ್ಲಿ ಹೆಚ್ಚು?*

ಸಂಸ್ಕೃತ ಭಾಷೆ ಮಾತನಾಡುವವರಲ್ಲಿ ಅಹಂ ಗಚ್ಛಾಮಿ.... ಅಹಂ ವದಾಮಿ.... ಅಹಂ ಜಾನಾಮಿ..

ಸುಧಾ ಸರನೋಬತ್, ಬೆಂಗಳೂರು

*ಹೆಣ್ಣು ಮದುವೆ ಮಾಡಿಕೊಳ್ಳುವ ಮೊದಲು ಯಾವ ಎರಡು ವಿಷಯ ಗಮನ ಇಟ್ಟುಕೊಳ್ಳಬೇಕು?*

ಹೋದ ಮನೆಯಲ್ಲಿ ಅನುಸರಿಸಬೇಕಾದ ಡ್ರೆಸ್ಸು, ಅಡ್ರೆಸ್ಸು!

ಸುರೇಶ ಎಂ, ಪಡ್ಡೆಬೈಲ್ ನೆಟ್ಲ

*ಹೆಣ್ಣೆಂದರೆ ನಿಜವಾಗಿಯೂ ಸಹನಾಮೂರ್ತಿ. ಹೇಗೆ?*

ಈ ಡಿಸೈನ್‌ಗೆ ಆ ಸೆರಗು, ಈ ಬುಟ್ಟಾ, ಆ ಅಂಚು, ಈ ಬ್ಲೌಸು, ಆ ಸ್ಟಿಚ್ಚು ಎಂದೆಲ್ಲ ಆರಿಸುವ ಸಹನೆ ಇರುವುದಲ್ಲ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ

*ತನ್ನ ಪತಿಗಳೈವರಲ್ಲಿ ದ್ರೌಪದಿ ಯಾರನ್ನು ಹೆಚ್ಚು ಪ್ರೀತಿಸಿದ್ದಿರಬಹುದು ಸಾರ್?*

ತನ್ನೆಲ್ಲ ಶಾಪಿಂಗ್ ಬ್ಯಾಗ್ ಹೊರುವ ಶಕ್ತಿ, ರೌಡಿಗಳಿಂದ ಕಾಪಾಡುವ ಸಾಹಸವಿದ್ದ ಭೀಮನನ್ನು.

ಅಕ್ಷಯ ಜೈನ್, ಶ್ರವಣಬೆಳಗೊಳ

*ಕನ್ನಡಿಗರ ಹೃದಯಕಮಲ ಅರಳಿಸಲು ಕಠೋರ ಉತ್ತರ ಕಿರಣ ಇಲ್ಲವೇಕೆ ನಿಮ್ಮಿಂದ?*

ಇದೆ. ಬೀರಿಯೂ ಆಗಿದೆ. ಆದರೆ ಕನ್ನಡಿಗರು ದಪ್ಪನೆಯ ರಗ್ಗು ಹೊದ್ದು ಮಲಗಿರುವುದರಿಂದ ಪ್ರಭಾವ ವಿಫಲವಾಗಿದೆ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ಇಂದಿನ ಯುವಕರು ಅತ್ತೆಮಾವನವರಿಗೆ ಆಂಟಿ ಅಂಕಲ್ ಎಂದು ಕರೆಯುತ್ತಾರಲ್ಲಾ...?*

ಭಾಷೆ ತಲೆ ಬೋಳಿಸ್ತು; ಭಾವ ನೋಡ್ರೀ ಎಂದರು ಕೈಲಾಸಂ. ಇಂದಿಗೆ ಅದೇ ಸರಿ.

ಉಷಾ ರಾಜಾರಾವ್, ಬೆಂಗಳೂರು

*ಗುರುಗಳು ಸೂಚಿಸಿದ ಪರಿಣಾಮ ತಿಳಿದಿರುವ ದಾರಿ ಒಳಿತೋ, ನಮಗೆ ತೋಚಿದ ಪರಿಣಾಮ ತಿಳಿಯದ ದಾರಿ ಒಳಿತೊ?*

ದಿನಕ್ಕೊಂದು ಒನ್‌ವೇ ಇರುವುದರಿಂದ ಅವೆರಡನ್ನೂ ಬಿಟ್ಟು ಜಿಪಿಎಸ್ ತೋರಿದ ದಾರಿ ಹಿಡಿಯುವುದೇ ಸೂಕ್ತ.

ನಾಗರತ್ನ ಎಂ.ಜಿ., ಬೆಂಗಳೂರು

*ಆಗ ಸೀರೆ, ಕುಂಕುಮ, ಬಳೆ ತೊಟ್ಟವರು ಲಕ್ಷಣವಂತೆಯರು; ಈಗಿನ ಹರಡಿದ ಕೂದಲ, ಚೂಡಿದಾರದ ಕುಂಕುಮರಹಿತೆಯರು?*

ಲಕ್ಷಣವಂತೆಯರೇ; ಅವರದು ಸೀತೆ, ಸಾವಿತ್ರಿಯರ ಲಕ್ಷಣ; ಇವರದು ಜ್ಯೂಲಿಯೆಟ್, ಕ್ಲಿಯೋಪಾತ್ರರ ಲಕ್ಷಣ.

## ಬಹುಮಾನಿತ ಪ್ರಶ್ನೆ

ಅಮರಯ್ಯಾ ಪತ್ರಿಮಠ, ಶೋರಾಪೂರ

*ಸಂಸಾರಿ ಸನ್ಯಾಸಿಯಾಗಬಯಸುವುದು ಏಕೆ?*

ಕಟ್ಟಿದ ಹಗ್ಗ/ಚೈನ್ ಬಿಚ್ಚಿಕೊಂಡು ಓಡಬಯಸುವುದು ಜೀವಿಗಳ ಸಹಜಗುಣ.

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ

*ಪಶುಗಳು ಮಾತನಾಡುವಂತಿದ್ದರೆ ಪ್ರಪಂಚ ಹೇಗಿರುತ್ತಿತ್ತು?*

ಮೊಟ್ಟೆಗೆಂದು ಹೋದಾಗ 'ಕಳ್ಳ ಕಳ್ಳ ಕಳ್ಳ ಕಳ್ಳ' ಎಂದು ಕೋಳಿ, ಕುರಿಗೆಂದು ಹೋದಾಗ 'ಕಾಪಾಡಿ... ಕೊಲೆಗಾರ ಬಂದ' ಎಂದು ಕುರಿ ಅರಚುವುದರಿಂದ ಇಡೀ ಪ್ರಪಂಚ ವೆಜಿಟೇರಿಯನ್ ಆಗುತ್ತಿತ್ತು.

ಆರತಿ ಘಟಿಕಾರ್, ದುಬೈ

*ತ್ರಿಲೋಕಸಂಚಾರಿಯಾದ ನಾರದರಿಗೆ ಯಾವ ಲೋಕದಲ್ಲೂ ಸೂಕ್ತ ಕನ್ಯೆ ಸಿಗಲಿಲ್ಲವೆ?*



ಚೆಲುವೆಯರೇನೋ ಸಿಕ್ಕರು; ಆದರೆ ಪರ್ಮನೆಂಟ್ ಟೂರಿಂಗ್ ಜಾಬ್ ಆದುದರಿಂದ ಒಪ್ಪಿಕೊಳ್ಳಲಿಲ್ಲವಂತೆ.

ಮುಕುಂದ ಹೆರಕಲ್ಲ, ಕಲಬುರ್ಗಿ

*ಸ್ವಾಮೀಜಿಗಳಂತೆ ರಾಜಕಾರಣಿಗಳ ತುಲಾಭಾರವನ್ನು ಅವರ ಹಿಂಬಾಲಕರು ಏಕೆ ಮಾಡುವುದಿಲ್ಲ?*

ತಕ್ಕಡಿಯಲ್ಲಿ ಹೀಗೆ ಹಾಕಿ ಹಾಗೆ ತಿರುಗುವಷ್ಟರಲ್ಲಿ ರಾಜಕಾರಣಿಯೇ ಹಾಕಿದುದನ್ನು ನುಂಗಿಬಿಡುವುದರಿಂದ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*50 ವರ್ಷದ ಹಿಂದಿನ ಚಿತ್ರಗಳು ನೆನಪಿನಲ್ಲಿ ಇವೆ. ಆದರೆ ಇಂದಿನ ಚಿತ್ರಗಳು ಏಕೆ ನೆನಪಿನಲ್ಲಿರುವುದಿಲ್ಲ?*

ಚಿತ್ತ ಸೆಳೆಯಲು ತೆಗೆದ ಚಿತ್ರಕ್ಕೆ ಇರುವ ಗುಣ ವಿತ್ತ ಸೆಳೆಯಲು ತೆಗೆದದ್ದಕ್ಕೆ ಇರುವುದಿಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಗಂಡಸರು ಗೊರಕೆ ಹೊಡೆದರೆ ಹೊರಕ್ಕೆ; ಹೆಂಗಸರು ಗೊರಕೆ ಹೊಡೆದರೆ?*

ಏನೇನೂ ವ್ಯತ್ಯಾಸವಿಲ್ಲ; ಆಗಲೂ ಗಂಡಸೇ ಹೊರಕ್ಕೆ.

■ ರಾಮ್